# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಸದಸ್ಯರ ಹೆಸರು | ಶ್ರೀ ಸುನೀಲ್ ವಲ್ಯಾಪುರೆ (ವಿಧಾನಸಭೆಯಿಂದ ಚುನಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 187 |
| ಉತ್ತರಿಸಬೇಕಾದ ದಿನಾಂಕ | 13-09-2022 |
| ಉತ್ತರಿಸಬೇಕಾದವರು | ನಗರಾಭಿವೃದ್ಧಿ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಲ್ಯಾಣ ಕರ್ನಾಟಕದ ಜಿಲ್ಲಾ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ ಕೊಳಚೆ ನೀರು ರಸ್ತೆ ಮೇಲೆ ಹರಿದು ಸಾರ್ವಜನಿಕರ ಸಂಚಾರಕ್ಕೆ ಹಾಗೂ ಜನರ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ.<br><br>ಕರ್ನಾಟಕ ನಗರ ನೀರ ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ಕಲ್ಯಾಣ ಕರ್ನಾಟಕದ ವ್ಯಾಪ್ತಿಯಲ್ಲಿ ಕೊಳಚೆ ನೀರು ಶುದ್ಧೀಕರಿಸಲು ಪ್ರಾರಂಭಿಸಲಾಗಿರುವ ಘಟಕಗಳು; ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಮತ್ತು ನಿರ್ಮಾಣ ಹಂತದಲ್ಲಿರುವ ಘಟಕಗಳ ವಿವರಗಳು ಈ ಕೆಳಗಿನಂತಿವೆ. |
| ಆ) | ಬಂದಿದ್ದಲ್ಲಿ, ಕೊಳಚೆ ನೀರು ಶುದ್ಧೀಕರಿಸಲು ಪ್ರಾರಂಭಿಸಲಾಗಿರುವ ಘಟಕಗಳೆಷ್ಟು; ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಮತ್ತು ನಿರ್ಮಾಣ ಹಂತದಲ್ಲಿರುವ ಘಟಕಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮತ್ತು ತಾಲ್ಲೂಕುವಾರು ಸಂಪೂರ್ಣ ವಿವರ ನೀಡುವುದು) | |

| ಕ್ರ ಸಂ | ನಗರ /ಪಟ್ಟಣ | ಘಟಕಗಳ ಸಂಖ್ಯೆ | ಸಾಮರ್ಥ್ಯ **(MLD)** | ಹಂತ |
|---|---|---|---|---|
| **ಕಲಬುರಗಿ ಜಿಲ್ಲೆ :** | | | | |
| 1 | ಕಲಬುರಗಿ | 2 | 25.00 | ಕಾರ್ಯ ನಿರ್ವಹಿಸುತ್ತಿದೆ. |
| | | | 20.00 | ಕಾರ್ಯ ನಿರ್ವಹಿಸುತ್ತಿದೆ. |
| 2 | ಚಿತ್ತಾಪೂರ | 1 | 5.10 | ಕಾರ್ಯ ನಿರ್ವಹಿಸುತ್ತಿದೆ. |
| 3 | ಜೇವರ್ಗಿ | 1 | 3.25 | ನಿರ್ಮಾಣ ಹಂತದಲ್ಲಿದೆ. |
| 4 | ಸೇಡಂ | 1 | 9.00 | ನಿರ್ಮಾಣ ಹಂತದಲ್ಲಿದೆ. |

| | | | |
|---|---|---|---|
| **ಯಾದಗಿರಿ ಜಿಲ್ಲೆ :** | | | |
| ಗುರುಮಿಠಕಲ್ | 1 | 3.00 | ಕಾರ್ಯ ನಿರ್ವಹಿಸುತ್ತಿದೆ. |
| **ಬೀದರ್ ಜಿಲ್ಲೆ:-** | | | |
| ಬೀದರ್ | 2 | 17.26 | ಕಾರ್ಯ ನಿರ್ವಹಿಸುತ್ತಿದೆ. |
| | | 7.00 | ನಿರ್ಮಾಣ ಹಂತದಲ್ಲಿದೆ. |

**ಬಳ್ಳಾರಿ ಜಿಲ್ಲೆ:-**

| | | | |
|---|---|---|---|
| ಬಳ್ಳಾರಿ | 4 | 30.00 | ಕಾರ್ಯ ನಿರ್ವಹಿಸುತ್ತಿದೆ. |
| | | 15.00 | ಕಾರ್ಯ ನಿರ್ವಹಿಸುತ್ತಿದೆ. |
| | | 10.00 | ಕಾರ್ಯ ನಿರ್ವಹಿಸುತ್ತಿದೆ. |
| | | 2.00 | ನಿರ್ಮಾಣ ಹಂತದಲ್ಲಿದೆ. |
| ಸಂಡೂರು | 2 | 6.00 | ನಿರ್ಮಾಣ ಹಂತದಲ್ಲಿದೆ. |
| | | 0.55 | ನಿರ್ಮಾಣ ಹಂತದಲ್ಲಿದೆ. |
| ಕೂಡ್ಲಿಗಿ | 1 | 4.60 | ಕಾರ್ಯ ನಿರ್ವಹಿಸುತ್ತಿದೆ. |
| ಹರಪನಹಳ್ಳಿ | 1 | 7.92 | ಕಾರ್ಯ ನಿರ್ವಹಿಸುತ್ತಿದೆ. |
| ಹಡಗಲಿ | 1 | 4.27 | ಕಾರ್ಯ ನಿರ್ವಹಿಸುತ್ತಿದೆ. |

**ಕೊಪ್ಪಳ ಜಿಲ್ಲೆ**

| | | | |
|---|---|---|---|
| ಗಂಗಾವತಿ | 1 | 14.00 | ಕಾರ್ಯ ನಿರ್ವಹಿಸುತ್ತಿದೆ. |

**ರಾಯಚೂರು ಜಿಲ್ಲೆ**

| | | | |
|---|---|---|---|
| ರಾಯಚೂರು | 1 | 5.50 | ಕಾರ್ಯ ನಿರ್ವಹಿಸುತ್ತಿದೆ. |

**ಕೆ.ಯು.ಐ.ಡಿ.ಎಫ್.ಸಿ ವತಿಯಿಂದ** ಏಷ್ಯಿಯನ್ ಅಭಿವೃದ್ಧಿ ಬ್ಯಾಂಕ್ ನೆರವಿನ ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕಾ ಕಾರ್ಯಕ್ರಮದಡಿ (ಎನ್‌ಕೆಯುಎಸ್‌ಐಪಿ) ಕಲ್ಯಾಣ ಕರ್ನಾಟಕ ವ್ಯಾಪ್ತಿಯಲ್ಲಿರುವ ಕಲ್ಬುರ್ಗಿ, ಬೀದರ್, ರಾಯಚೂರು, ಸಿಂಧನೂರು ಮತ್ತು ಹೊಸಪೇಟೆ ನಗರಗಳಲ್ಲಿ ಒಳಚರಂಡಿ ಕಾಮಗಾರಿಯನ್ನು ಕೈಗೊಳ್ಳಲಾಗಿದೆ.

ಈ ಪೈಕಿ ಕಲ್ಬುರ್ಗಿ, ಬೀದರ್ ಮತ್ತು ರಾಯಚೂರು ನಗರಗಳಲ್ಲಿನ ಒಳಚರಂಡಿ ಕಾಮಗಾರಿಗಳನ್ನು ಪೂರ್ಣಗೊಳಿಸಿ ಈಗಾಗಲೇ ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರಿಸಲಾಗಿದೆ. ಸಿಂಧನೂರು ನಗರದಲ್ಲಿನ ಒಳಚರಂಡಿ ಕಾಮಗಾರಿಯು ಪೂರ್ಣಗೊಂಡಿದ್ದು, ಸ್ಥಳೀಯ ಸಂಸ್ಥೆಗೆ ಹಸ್ತಾಂತರಿಸುವ ಪ್ರಕ್ರಿಯೆಯಲ್ಲಿದೆ.

ಹೊಸಪೇಟೆ ಮತ್ತು ಸಿಂಧನೂರು ನಗರಗಳಲ್ಲಿ ಎನ್.ಕೆ.ಯು.ಎಸ್.ಐ.ಪಿ ಯೋಜನೆಯಡಿ ಕಾಮಗಾರಿ ಕೈಗೊಂಡಿರುವ ಪ್ರದೇಶಗಳಲ್ಲಿ ಒಳಚರಂಡಿ ನೀರು ರಸ್ತೆಯ ಮೇಲೆ ಹರಿಯುವ ಬಗ್ಗೆ ದೂರು ಬಂದ ತಕ್ಷಣ ಸರಿಪಡಿಸಲು ಕ್ರಮ ವಹಿಸಲಾಗುತ್ತಿದೆ.

ಏಷ್ಯಿಯನ್ ಅಭಿವೃದ್ಧಿ ಬ್ಯಾಂಕ್ ನೆರವಿನ ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕಾ ಕಾರ್ಯಕ್ರಮದಡಿ (ಎನ್‌ಕೆಯುಎಸ್‌ಐಪಿ)**

ಎನ್.ಕೆ.ಯು.ಎಸ್.ಐ.ಪಿ ಯೋಜನೆ ಅಡಿಯಲ್ಲಿ ಕಲ್ಬುರ್ಗಿ, ಬೀದರ್, ರಾಯಚೂರು, ಸಿಂಧನೂರು ಮತ್ತು ಹೊಸಪೇಟೆ ನಗರಗಳಲ್ಲಿ ಕೊಳಚೆ ನೀರು ಸಂಸ್ಕರಣ ಘಟಕ (ಎಸ್.ಟಿ.ಪಿ) ನಿರ್ಮಿಸಲಾಗಿದೆ. ವಿವರವನ್ನು **ಅನುಭಂಧ-1** ರಲ್ಲಿ ನೀಡಲಾಗಿದೆ.

**ವಿಶ್ವ ಬ್ಯಾಂಕ್ ನೆರವಿನ ಕರ್ನಾಟಕ ಪೌರ ಸುಧಾರಣಾ ಯೋಜನೆ (ಕೆಎಮ್‌ಆರ್ ಪಿ)**

ಕಲ್ಯಾಣ ಕರ್ನಾಟಕ ವಿಭಾಗದ ಬೀದರ್ ಜಿಲ್ಲೆಯ ಹುಮ್ನಾಬಾದ್ ಪುರಸಭೆ ವ್ಯಾಪ್ತಿಯಲ್ಲಿ ವಿಶ್ವ ಬ್ಯಾಂಕ್ ನೆರವಿನ ಕರ್ನಾಟಕ ಪೌರ ಸುಧಾರಣಾ ಯೋಜನೆ (ಕೆಎಮ್‌ಆರ್‌ಪಿ)ಯ ಪೌರಬಂಡವಾಳ ಹೂಡಿಕೆ ಘಟಕದಡಿ ಒಳಚರಂಡಿ ಕಾಮಗಾರಿಯನ್ನು ಅನುಷ್ಠಾನಗೊಳಿಸಲಾಗಿರುತ್ತದೆ. ಕಾಮಗಾರಿಯನ್ನು ದಿನಾಂಕ: 29.01.2013 ರಂದು ಗುತ್ತಿಗೆ ನೀಡಿದ್ದು ದಿನಾಂಕ: 15.10.2019 ರಂದು ಪೂರ್ಣಗೊಂಡಿರುತ್ತದೆ ಹಾಗೂ ಪೂರ್ಣಗೊಂಡ ಒಳಚರಂಡಿ ಮತ್ತು ರೊಚ್ಚು ಸಂಸ್ಕರಣ ಘಟಕಗಳು ಪುರಸಭೆಯ ಸುಪರ್ಧಿಯಲ್ಲಿರುತ್ತವೆ. ಕಾಮಗಾರಿಯ ಅನುಷ್ಠಾನಗೊಳಿಸಿರುವ ವಿವರ ಈ ಕೆಳಕಂಡಂತಿವೆ:

| (ರೂ. ಕೋಟಿಗಳಲ್ಲಿ) | | ಕಾಮಗಾರಿಯ ವಿವರಗಳು | ಷರಾ |
|---|---|---|---|
| ಗುತ್ತಿಗೆ ಮೊತ್ತ | ಆರ್ಥಿಕ ಪ್ರಗತಿ | • ಒಳಚರಂಡಿ ಜಾಲದ ಉದ್ದ: 42 ಕಿ.ಮಿ<br>• ಮ್ಯಾನ್ ಹೋಲ್: 1453.<br>• ಮನೆ ಸಂಪರ್ಕ ಜೋಡಣೆ: 2982<br>• ರೊಚ್ಚು ಸಂಸ್ಕರಣ ಘಟಕ (ಡಬ್ಲೂಎಸ್‌ಪಿ) 6 ಎಂಎಲ್‌ಡಿ | ಕಾಮಗಾರಿಯು ದಿನಾಂಕ: 15.10.2019 ಪೂರ್ಣಗೊಂಡಿರುತ್ತದೆ. |

ಇ) ಸದರಿ ಕಾಮಗಾರಿಗಳ ಗುಣಮಟ್ಟವನ್ನು ಪರೀಕ್ಷಿಸಲಾಗಿದೆಯೇ; ಹಾಗಿದ್ದಲ್ಲಿ, ಇದನ್ನು ಯಾವ

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ಅಮೃತ್ ಯೋಜನೆಯಡಿ ಕೈಗೊಂಡಿರುವ ಕಾಮಗಾರಿಯ ಗುಣಮಟ್ಟ ಪರಿಶೀಲನೆಯನ್ನು ಸದರಿ ಯೋಜನೆಯ ಅಭಿವೃದ್ಧಿ ಮತ್ತು ನಿರ್ವಹಣೆ ಸಲಹೆಗಾರ (PDMC) ಮೆ|| ಐ.ಪಿ.ಇ. ಗ್ಲೋಬಲ್, ನವದೆಹಲಿ ರವರಿಂದ ಕಾಲಕಾಲಕ್ಕೆ ಮೂರನೇ ವ್ಯಕ್ತಿ ತಪಾಸಣೆಯಡಿ

| | | |
|---|---|---|
| | ರೀತಿಯಲ್ಲಿ, ಯಾವ ಸಂಸ್ಥೆಯಿಂದ ಕೈಗೊಳ್ಳಲಾಗಿದೆ; ಈ ಕಾಮಗಾರಿಯನ್ನು ಯಾವ ಸಂಸ್ಥೆಗೆ/ ವ್ಯಕ್ತಿಗೆ ವಹಿಸಲಾಗಿದೆ: (ಸಂಪೂರ್ಣ ಮಾಹಿತಿ ನೀಡುವುದು) | ಕೈಗೊಳ್ಳಲಾಗಿರುತ್ತದೆ. ಇತರೆ ಯೋಜನೆಯಡಿ ಕೈಗೊಂಡಿರುವ ಕಾಮಗಾರಿಯ ಗುಣಮಟ್ಟ ಪರಿಶೀಲನೆಯನ್ನು ಮಂಡಳಿ ವತಿಯಿಂದ ನೇಮಿಸಲಾಗಿರುವ ಮೂರನೇ ವ್ಯಕ್ತಿ ತಪಾಸಣೆ ಏಜೆನ್ಸಿಯಾದ ಮೆ\|\| ಸಿವಿಲ್ ಎಕ್ಸ್ಪರ್ಟ್, ಬೆಂಗಳೂರು ಇವರಿಂದ ಕೈಗೊಂಡಿದ್ದು, ಪ್ರಸ್ತುತ, ಮೆ\|\| ಬ್ಯುರೋ ವೆರಿಟಾಸ್ ಇಂಡಿಯಾ ಪ್ರೈ.ಲೀ, ಬೆಂಗಳೂರು ರವರಿಂದ ತಪಾಸಣೆ ನಡೆಸಲಾಗುತ್ತಿದೆ.<br>**ಏಷ್ಯಿಯನ್ ಅಭಿವೃದ್ಧಿ ಬ್ಯಾಂಕ್ ನೆರವಿನ ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕಾ ಕಾರ್ಯಕ್ರಮದಡಿ (ಎನ್‌ಕೆಯುಎಸ್‌ಐಪಿ)**<br>ಎನ್‌ಕೆಯುಎಸ್‌ಐಪಿ ಯೋಜನೆಯ ವಿನ್ಯಾಸ ಮತ್ತು ಅನುಷ್ಠಾನದ ಗುಣಮಟ್ಟವನ್ನು ಕಾಪಾಡಲು ಸ್ಪರ್ಧಾತ್ಮಕ ಟೆಂಡರ್ ಮೂಲಕ ಸಮಾಲೋಚಕರನ್ನು ನೇಮಿಸಲಾಗಿತ್ತು. ಕಾಮಗಾರಿ ಗುಣಮಟ್ಟವನ್ನು ಐಎಸ್ ಮಾನದಂಡದಲ್ಲಿ ನಿಗಧಿಪಡಿಸಿರುವ ಅಂಶಗಳಂತೆ ಆಗಿಂದಾಗ್ಗೆ ಕೆಯುಐಡಿಎಫ್‌ಸಿ ಸಂಸ್ಥೆಯಿಂದ ನೇಮಿಸಲ್ಪಟ್ಟ ಯೋಜನಾ ಸಮಾಲೋಚಕರಿಂದ ಪರಿಶೀಲಿಸಲಾಗುತ್ತಿದೆ.<br>ಯೋಜನೆಯ ಎಲ್ಲಾ ಕಾಮಗಾರಿಗಳಿಗೆ ಉಪಯೋಗಿಸಿರುವ ಸಾಮಗ್ರಿಗಳಾದ ಮರಳು, ಸೂಕ್ತ ಮಣ್ಣು, ಜಲ್ಲಿ, ಸಿಮೆಂಟ್ ಮತ್ತು ಕಬ್ಬಿಣದ ಗುಣಮಟ್ಟವನ್ನು ಪರಿಶೀಲಿಸಿ IS Specifications ನಲ್ಲಿ ನಿಗಧಿಪಡಿಸಿರುವ ಅಂಶಗಳಿಗೆ ತಾಳೆಯಾದ ಮೇಲೆ ಈ ಸಾಮಗ್ರಿಗಳನ್ನು ಉಪಯೋಗಿಸಿ ಕೆಲಸ ನಿರ್ವಹಿಸಿದೆ.<br>ಕಾಮಗಾರಿಗಳಿಗೆ ನೇಮಿಸಲ್ಪಟ್ಟ ಸಮಾಲೋಚಕರ ವಿವರ ಕೆಳಗಿನಂತಿದೆ.<br>• ಮೆ//ಹೆಸ್ಕೊನಿಂಗ್ ಡಿಹೆಚ್‌ವಿ ಕನ್ಸಲ್ಟಿಂಗ್ ಇಂಡಿಯಾ ಲಿ.<br>• ಮೆ//ಎಸ್.ಎನ್.ಸಿ.ಲ್ಯಾವಲಿನ್ ಇನ್ಫ್ರಾಸ್ಟ್ರಕ್ಚರ್.ಲಿ .<br>• ಮೆ//ಎಸ್‌ಟಿಇಎಂ - ಸೆಂಟರ್ ಫಾರ್ ಸಿಂಬಯಾಸಿಸ್ ಆಫ್ ಟೆಕ್ನೋಲಜಿ ಎನ್ವಿರಾನ್ಮೆಂಟ್ ಮ್ಯಾನೇಜ್‌ಮೆಂಟ್.<br>**ವಿಶ್ವ ಬ್ಯಾಂಕ್ ನೆರವಿನ ಕರ್ನಾಟಕ ಪೌರ ಸುಧಾರಣಾ ಯೋಜನೆ (ಕೆಎಮ್‌ಆರ್ ಪಿ)**<br>ಕಾಮಗಾರಿಯನ್ನು ವಿಶ್ವ ಬ್ಯಾಂಕ್ ಮಾರ್ಗದರ್ಶನ ಹಾಗೂ ನಿಯಮಗಳನ್ವಯ ಕಾಮಗಾರಿಯ ಗುಣಮಟ್ಟವು ಯೋಜನಾ ಸಮಾಲೋಚಕರ ಪರಿಶೀಲನೆಗೊಳಪಟ್ಟಿರುತ್ತದೆ.<br>1. ಯೋಜನಾ ಸಮಾಲೋಚಕರು – ಮೆ\|\|ಶಾ ಟೆಕ್ನಿಕಲ್ ಕನ್ಸಲಟೆಂಟ್, ಮುಂಬೈ.<br>2. ಯೋಜನಾ ಗುತ್ತಿಗೆದಾರರು – ಮೆ\|\| ಗೊರೂರು ಇನ್ಫ್ರಾ ಟೆಕ್ ಪ್ರೈ.ಲಿ., ಮುಂಬೈ |

ಈ) ಕಲ್ಯಾಣ ಕರ್ನಾಟಕ ಜಿಲ್ಲೆಗಳಲ್ಲಿ ಕಳೆದ 3 ವರ್ಷಗಳಲ್ಲಿ ಪ್ರಾರಂಭಿಸಿರುವ ಕೊಳಚೆ ನೀರು ಶುದ್ಧೀಕರಣ ಘಟಕಗಳ ಸಂಖ್ಯೆ ಎಷ್ಟು ಹಾಗೂ ಅದಕ್ಕೆ ಒದಗಿಸಿರುವ ಅನುದಾನ ಎಷ್ಟು? (ಜಿಲ್ಲಾವಾರು ತಾಲ್ಲೂಕುವಾರು ಮಾಹಿತಿ ನೀಡುವುದು)

ಕರ್ನಾಟಕ ನಗರ ನೀರ ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ಕಲ್ಯಾಣ ಕರ್ನಾಟಕ ಜಿಲ್ಲೆಗಳಲ್ಲಿ ಕಳೆದ 3 ವರ್ಷಗಳಲ್ಲಿ ಪ್ರಾರಂಭಿಸಿರುವ ಕೊಳಚೆ ನೀರು ಶುದ್ಧೀಕರಣ ಘಟಕಗಳ ನಿರ್ಮಾಣಕ್ಕೆ ಒದಗಿಸಲಾಗಿರುವ ಅನುದಾನದ ವಿವರ ಈ ಕೆಳಗಿನಂತಿದೆ.

| ಕ್ರ. ಸಂ. | ನಗರ /ಪಟ್ಟಣ | ಕೊಳಚೆ ನೀರು ಶುದ್ಧೀಕರಣ ಘಟಕಕ್ಕೆ ಮಂಜೂರಾದ ಅನುದಾನ (ರೂ. ಲಕ್ಷಗಳಲ್ಲಿ) |
|---|---|---|
| 1 | ಕಲಬುರಗಿ | 1600.00 (20.00 ಎಮ್.ಎಲ್.ಡಿ ಘಟಕ) |
| 2 | ಜೇವರ್ಗಿ | 817.64 |
| 3 | ಸೇಡಂ | 914.20 |
| 4 | ಗುರುಮಿಠಕಲ್ | 325.00 |
| 5 | ಬೀದರ್ | 2602.50 |
| 6 | ಬಳ್ಳಾರಿ | 1220.00 |
| 7 | ಸಂಡೂರು | 690.22 |
| 8 | ಕೂಡ್ಲಿಗಿ | 755.71 |
| 9 | ಗಂಗಾವತಿ | 700.00 |
| 10 | ರಾಯಚೂರು | 610.00 |

ಕೆ.ಯು.ಐ.ಡಿ.ಎಫ್.ಸಿ ವತಿಯಿಂದ ಕಲ್ಯಾಣ ಕರ್ನಾಟಕದ ಬೀದರ್ ಜಿಲ್ಲೆಯ ಹುಮ್ನಾಬಾದ್ ಪುರಸಭೆ ವ್ಯಾಪ್ತಿಯಲ್ಲಿ 6 ಎಂಎಲ್‌ಡಿ ಸಾಮರ್ಥ್ಯದ ಕೊಳಚೆ ನೀರು ಶುದ್ಧೀಕರಣ ಘಟಕ ಕಾಮಗಾರಿಯನ್ನು ದಿನಾಂಕ: 15.10.2019 ರಂದು ಪೂರ್ಣಗೊಳಿಸಿದ್ದು, ಇದರ ವೆಚ್ಚವು ಒಳಚರಂಡಿ ಯೋಜನೆಯ ರೂ.29.75 ಕೋಟಿ ಅಂದಾಜು ವೆಚ್ಚದಲ್ಲಿ ಒಳಗೊಂಡಿರುತ್ತದೆ.

ಸಂಖ್ಯೆ : ನಅಇ 128 ಯುಎಂಎಸ್ 2022

(ಬಿ.ಎ.ಬಸವರಾಜ)

ನಗರಾಭಿವೃದ್ಧಿ ಸಚಿವರು

**(ಬಿ.ಎ. ಬಸವರಾಜ)**

**ನಗರಾಭಿವೃದ್ಧಿ ಸಚಿವರು**

ಪ್ರಶ್ನೆ ಸಂಖ್ಯೆ - 187 ... ಅನುಬಂಧ - 1

**ಏಷ್ಯನ್ ಅಭಿವೃದ್ಧಿ ಬ್ಯಾಂಕ್ ನೆರವಿನ "ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕಾ ಕಾರ್ಯಕ್ರಮ" ದಡಿ ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿ ವ್ಯಾಪ್ತಿಯಲ್ಲಿ ಬರುವ ಪಟ್ಟಣಗಳ ಒಳಚರಂಡಿ ಕಾಮಗಾರಿಗಳ ವಿವರ**

| ಕ್ರ. ಸಂ. | ಜಿಲ್ಲೆ | ನಗರ ಸ್ಥಳೀಯ ಸಂಸ್ಥೆ | ಜಲ ತ್ಯಾಜ್ಯ ಸಂಸ್ಕರಣ ಘಟಕ | ಸಂಖ್ಯೆ | ಷರ |
|---|---|---|---|---|---|
| 1 | ಕಲ್ಬುರ್ಗಿ | ಕಲ್ಬುರ್ಗಿ | ನಂದೀಕೂರ್ ಗ್ರಾಮದ ಹತ್ತಿರ 40 ಎಂ.ಎಲ್.ಡಿ ಎಸ್‌ಬಿಆರ್ ಮಾದರಿಯ ಎಸ್.ಟಿ.ಪಿಯ ನಿರ್ಮಾಣ ಮತ್ತು ನಿರ್ವಹಣೆ | ಒಂದು ಸಂಖ್ಯೆ 40 ಎಂ.ಎಲ್.ಡಿ | ಸ್ಥಳೀಯ ಸಂಸ್ಥೆಗೆ ಹಸ್ತಾಂತಿರಿಸಿದೆ. |
| 2 | ಬೀದರ್ | ಬೀದರ್ | ಗೊರೊನಹಳ್ಳಿ ಗ್ರಾಮದ ಹತ್ತಿರ 17.26 ಎಂ.ಎಲ್.ಡಿ ಎಫ್‌ಎಪಿಲ್ ಮಾದರಿಯ ಎಸ್.ಟಿ.ಪಿ ನಿರ್ಮಾಣ | ಒಂದು ಸಂಖ್ಯೆ 17.26 ಎಂ.ಎಲ್.ಡಿ | ಸ್ಥಳೀಯ ಸಂಸ್ಥೆಗೆ ಹಸ್ತಾಂತಿರಿಸಿದೆ. |
| 3 | ವಿಜಯನಗರ | ಹೊಸಪೇಟೆ | ಬೆಳಗಾಡು ಗ್ರಾಮದ ಹತ್ತಿರ 27 ಎಂ.ಎಲ್.ಡಿ ಎಫ್‌ಎಪಿಲ್ ಮಾದರಿಯ ಎಸ್.ಟಿ.ಪಿ ನಿರ್ಮಾಣ | ಒಂದು ಸಂಖ್ಯೆ 27 ಎಂ.ಎಲ್.ಡಿ | ಸ್ಥಳೀಯ ಸಂಸ್ಥೆಗೆ ಹಸ್ತಾಂತಿರಿಸಿದೆ. |
| 4 | ರಾಯಚೂರು | ರಾಯಚೂರು | ಹೊಸೂರು & ಏಕ್ಲಾಸಪುರ್ ವಲಯದಲ್ಲಿ 8 ಮತ್ತು 20 ಎಂಎಲ್‌ಡಿ ಎಫ್‌ಎಪಿಲ್ ಮಾದರಿಯ ಎಸ್.ಟಿ.ಪಿ ಘಟಕ ನಿರ್ಮಾಣ ಹಾಗೂ ಸಂಬಂಧಿತ ಕಾಮಗಾರಿಗಳು | 2 ಸಂಖ್ಯೆ 8 ಮತ್ತು 20 ಎಂಎಲ್‌ಡಿ | ಸ್ಥಳೀಯ ಸಂಸ್ಥೆಗೆ ಹಸ್ತಾಂತಿರಿಸಿದೆ. |
| 5 | | ಸಿಂಧನೂರು | ಸುಕಾಲ್‌ಪೇಟ್ ಗ್ರಾಮದ ಹತ್ತಿರ 12 ಎಂಎಲ್‌ಡಿ ಎ.ಎಸ್.ಪಿ ಮಾದರಿ ಎಸ್.ಟಿ.ಪಿ ನಿರ್ಮಾಣ | ಒಂದು ಸಂಖ್ಯೆ 12 ಎಂಎಲ್‌ಡಿ | ಕಾಮಗಾರಿ ಪೂರ್ಣಗೊಂಡಿದೆ. ನಗರಸಭೆಗೆ ಹಸ್ತಾಂತರಿಸುವ ಪ್ರಕ್ರಿಯೆಯಲ್ಲಿದೆ. |

**ಕಾರ್ಯ ವ್ಯವಸ್ಥಾಪಕರು**
**(ಎನ್.ಕೆ.ಯು.ಎಸ್.ಐ.ಪಿ)**